೨೫. ಪ್ರಮಾಣಿತ ಶಾಲೆ ಮತ್ತು ಪ್ರತಿವೀಕ್ಷಣಾ ಗೃಹಗಳು 26.ಪ್ರಿವೆನ್ಷನ್ ಆಂಡ್ ಕಂಟ್ರೋಲ್ ಆಫ್ ಜುವೆನೈಲ್ ಸೋಷಿಯಲ್ ಮಾಲ್ ಅಡಜುಸ್ಟ್‌ಮೆಂಟ್ ಕೇಂದ್ರ ಪುರಸ್ಕೃತ ಯೋಜನೆ

೨೭. ಪರಿವರ್ತನಾ ಸಂಸ್ಥೆಗಳ ಸುಧಾರಣೆ

೨೮. ಸಾಮಾಜಿಕ ಪಿಡುಗುಗಳ ನಿರ್ಮೂಲನೆಯ ಒತ್ತಾಯಕ್ಕಾಗಿ ವಿಭಾಗ

ಜಿಲ್ಲಾ ವಲಯ ಯೋಜನೆಗಳು

ಶಿಶುಕಲ್ಯಾಣ

1. ಸಮಗ್ರ ಶಿಶು ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ

2. ನಿರ್ಗತಿಕ ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಯೋಜನೆ

3. ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ

4. ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು

5. ಅಂಗನವಾಡಿ ಕಟ್ಟಡಗಳ ನಿರ್ಮಾಣ

ಮಹಿಳಾಭಿವೃದ್ಧಿ

6. ಮಹಿಳಾ ಮಂಡಳಗಳ ಆರ್ಥಿಕ ನೆರವು

7. ವಿಧವೆಯರ ಮತ್ತು ದೇವದಾಸಿಯರ ವಿವಾಹಕ್ಕೆ ಧನಸಹಾಯ

8. ನಮ್ಮ ಮಗಳು ನಮ್ಮ ಶಕ್ತಿ

ಪೌಷ್ಟಿಕ ಆಹಾರ ಯೋಜನೆ

9. ಶಾಲಾ ಪೂರ್ವ ಮಕ್ಕಳ ಊಟದ ಯೋಜನೆ

10.ವಿಶೇಷ ಘಟಕ ಯೋಜನೆ ಶಾಲಾ ಪೂರ್ವ ಮಕ್ಕಳಿಗೆ ಊಟದ ಯೋಜನೆ

11.ಗಿರಿಜನ ಉಪಯೋಜನೆ.

ಮೋಟಾರು ವಾಹನ ಇಲಾಖೆಯ ಆಧುನೀಕರಣಗೊಳಿಸುವುದು.

4180(4185) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :-- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಸರ್ಕಾರದ ಬೊಕ್ಕಸಕ್ಕೆ ಆದಾಯ ತರುವ ಹಲವಾರು ಇಲಾಖೆಗಳಲ್ಲಿ, ಸಾರಿಗೆ ಇಲಾಖೆ ಪ್ರಮುಖವಾದುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ವಿವಿಧ ಮೋಟಾರು ವಾಹನ ನಿಯಮಾವಳಿಯ ಉಲ್ಲಂಘನೆಯನ್ನು ತಡೆಯಲು ಮೋಟಾರು ವಾಹನ ಇಲಾಖೆಯ ಸಿಬ್ಬಂದಿಗೆ ನೀಡಿರುವ ಸವಲತ್ತುಗಳೇನು;

3. ಮೋಟಾರು ವಾಹನ ಇಲಾಖೆಯನ್ನು ಆಧುನಿಕ ಆಡಳಿತ ಪದ್ಧತಿ ಪ್ರಕಾರ ಆಧುನೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

4. ಈ ದಿಸೆಯಲ್ಲಿ ಮೀಸಲಿಸಿರುವ ಅನುದಾನ ಎಷ್ಟು?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು) :—

1. ಹೌದು

2. ಮೋಟಾರು ವಾಹನಗಳನ್ನು ತನಿಖೆ ಮಾಡುವ ಸಿಬ್ಬಂದಿಗೆ ಜೀಪುಗಳನ್ನು ಒದಗಿಸಲಾಗಿದೆ ಹಾಗೂ ಮೋಟಾರು ವಾಹನಗಳಿಂದುಂಟಾಗುವ ವಾಯುಮಾಲಿನ್ಯವನ್ನು ತನಿಖೆ ಮಾಡುವ ಸಲುವಾಗಿ ಗ್ಯಾಸ್ ಅನಲೈಜರ್ ಹಾಗೂ ಸ್ಮೋಕ್ ಮೀಟರುಗಳನ್ನು ಒದಗಿಸಲಾಗಿದೆ.

3. ಸಾರಿಗೆ ಇಲಾಖೆಯನ್ನು ಸಂಪೂರ್ಣವಾಗಿ ಗಣಕೀಕರಿಸುವ ಮಹತ್ವದ ಯೋಜನೆಯನ್ನು ಹಾಕಿಕೊಳ್ಳಲಾಗಿದ್ದು, ಈ ಯೋಜನೆಯ ಪ್ರಥಮಹಂತವಾಗಿ ಬೆಂಗಳೂರಿನ 5 ಪ್ರಾದೇಶಿಕ ಸಾರಿಗೆ ಕಛೇರಿಗಳು ಹಾಗೂ ಸಾರಿಗೆ ಆಯುಕ್ತರ ಕಛೇರಿಯನ್ನು ಗಣಕೀಕರಣಗೊಳಿಸುವ ಕಾರ್ಯವು ಮುಕ್ತಾಯದ ಹಂತದಲ್ಲಿದೆ. ತದನಂತರ ಈ ಯೋಜನೆಯನ್ನು ರಾಜ್ಯದ ಇತರೆ ಕಛೇರಿಗಳಿಗೂ ವಿಸ್ತರಿಸುವ ಯೋಜನೆ ಇದೆ. ಅಲ್ಲದೆ, ಬೆಂಗಳೂರಿನ 5 ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ಚಾಲಕರುಗಳಿಗೆ ಲ್ಯಾಮಿನೇಟೆಡ್ ಕಾರ್ಡ್ ಮಾದರಿಯ ಚಾಲನಾ ಅನುಜ್ಞಾಪತ್ರಗಳನ್ನು ನೀಡಲಾಗುತ್ತಿದೆ. ಈ ಯೋಜನೆಯು ಇತರೇ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೂ ಜಾರಿಗೆ ತರುವ ಯೋಜನೆ ಇದೆ ಹಾಗೂ ಚಾಲಕರ ನೈಪುಣ್ಯತೆಯನ್ನು ನಿಖರವಾಗಿ ಕಂಡುಕೊಂಡು ಅವರಿಗೆ ಚಾಲನಾ ಅನುಜ್ಞಾಪತ್ರ ನೀಡಿಕೆಗಾಗಿ ಚಾಲನಾ ನೈಪುಣ್ಯ ಪರೀಕ್ಷಿಸಲು ರಾಜ್ಯದ 9 ಪ್ರಾದೇಶಿಕ ಸಾರಿಗೆ ಕಛೇರಿಗಳ ಬಳಿ ಡ್ರೈವಿಂಗ್ ಟ್ರಾಕ್‌ನ್ನು ನಿರ್ಮಿಸಲಾಗಿದೆ.

4. ಸಾರಿಗೆ ಇಲಾಖೆಯಲ್ಲಿ ಗಣಕೀಕರಣಗೊಳಿಸುವ ಸಲುವಾಗಿ 10ನೇ ಹಣಕಾಸು ಆಯೋಗವು 2.18 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ನೀಡಿರುತ್ತದೆ.